ಮೂರ್ನಾಲ್ಕು ತಿಂಗಳಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಜನರಿಗೆ ಕಾವೇರಿ
ಕುಡಿಯುವ ನೀರು ಪೂರೈಸಲು ಅಧಿಕಾರಿಗಳಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಸೂಚನೆ

ಉದಯಕಾಲ ನ್ಯೂಸ್

ಬೆಂಗಳೂರು: ಮೂರ್ನಾಲ್ಕು ತಿಂಗಳುಗಳಲ್ಲಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಜನರಿಗೆ ಕುಡಿಯಲು ಕಾವೇರಿ ನೀರನ್ನು ಪೂರೈಸಬೇಕು ಎಂದು ಡಿಸಿಎಂ ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯಲಚೇನಹಳ್ಳಿಯಲ್ಲಿ ಗುರುವಾರ ನಡೆದ ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವಕುಮಾರ್, ಸಂಸದರಾದ ಡಿ.ಕೆ. ಸುರೇಶ್ ಅವರು ಈ ಭಾಗದ ಟ್ರಾಫಿಕ್ ಸಮಸ್ಯೆ ಹಾಗು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಕ್ಷೇತ್ರದ ಜನರಿಗೆ ಕುಡಿಯಲು ಕಾವೇರಿ ನೀರನ್ನು ಪೂರೈಸಬೇಕು ಎಂಬುದು ಸುರೇಶ್ ಅವರ ಸಂಕಲ್ಪ.

ಬಿಡಿಎ ಹಾಗೂ ಬಿಡಬ್ಲ್ಯೂಎಸ್‌ಎಸ್ ಬಿ ಅಧಿಕಾರಿಗಳು ಈ ಭಾಗದ ಜನರಿಗೆ ಕುಡಿಯಲು ಕಾವೇರಿ ನೀರು ಪೂರೈಸುವತ್ತ ಆದ್ಯತೆ ನೀಡಬೇಕು ಎಂದು ಸೂಚಿಸುತ್ತೇನೆ.

ಎಲ್ಲೂ ನ್ಯಾಯ ಸಿಗದಿದ್ದಾಗ ಮಾತ್ರ ಜನ ನಮ್ಮ ಬಳಿ ಬರುತ್ತಾರೆ. ಹೀಗಾಗಿ ಜನರ ಸಮಸ್ಯೆಗೆ ಅಧಿಕಾರಿಗಳಿಂದ ಪರಿಹಾರ ಕೊಡಿಸುವ ಉದ್ದೇಶದಿಂದ ನಾನು ಇಂದು ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇನೆ. ಈ ತಿಂಗಳು ಬೆಂಗಳೂರಿನ ಎಲ್ಲಾ ಕ್ಷೇತ್ರಗಳ ಸಮಸ್ಯೆ ಬಗೆಹರಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನಿಮ್ಮ ಸಮಸ್ಯೆ ಆಲಿಸಲು ಬೆಂಗಳೂರಿಗೆ ಸಂಬಂಧಿಸಿದ ಎಲ್ಲಾ ಇಲಾಖೆಯ 500 ಅಧಿಕಾರಿಗಳು ಇಲ್ಲಿದ್ದಾರೆ. ನೀವು ನನಗೆ ಅಹವಾಲು ನೀಡುವುದಕ್ಕಿಂದ ಮುಖ್ಯವಾಗಿ ನೀವು ನಿಮ್ಮ ಅಹವಾಲುಗಳನ್ನು ನೋಂದಣಿ ಮಾಡಿಸಬೇಕು. ಜತೆಗೆ ನಿಮ್ಮ ದೂರವಾಣಿ ಸಂಖ್ಯೆಯನ್ನು ಕೂಡ ನಮೂದಿಸುವುದು ಬಹಳ ಮುಖ್ಯ. ಇದರಿಂದ ಅಧಿಕಾರಿಗಳು ಮತ್ತೆ ನಿಮ್ಮನ್ನು ಸಂಪರ್ಕ ಮಾಡಲು ನೆರವಾಗುತ್ತದೆ.

ಒಂದೇ ದಿನದಲ್ಲಿ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡಲು ಸಾಧ್ಯವಾಗದಿದ್ದರೂ ಕಾನೂನು ಚೌಕಟ್ಟಿನಲ್ಲಿ ನಿಮಗೆ ಸಹಾಯ ಮಾಡಲು ಪ್ರಯತ್ನಿಸುತ್ತೇವೆ ಎಂದರು.

ಜನ ಸೇವೆ ಜನಾರ್ದನ ಸೇವೆ ಎಂಬ ಮಾತನ್ನು ನಂಬಿ ಅದರಂತೆ ನಾವು ಕೆಲಸ ಮಾಡುತ್ತಿದ್ದೇವೆ. ಶಿವಕುಮಾರ ಸ್ವಾಮೀಜಿಗಳು, 'ದೊಡ್ಡವನಾಗಲು ಪ್ರಯತ್ನ ಮಾಡಬೇಡ, ಒಳ್ಳೆಯವನಾಗಲು ಪ್ರಯತ್ನ ಮಾಡು, ಆಗ ತಂತಾನೇ ದೊಡ್ಡವನಾಗುತ್ತೀಯಾ' ಎಂದು ಹೇಳಿದ್ದಾರೆ. ನಮ್ಮ ಸರ್ಕಾರ ಜನಪರ ಸರ್ಕಾರವಾಗಿ ಕೆಲಸ ಮಾಡುತ್ತಿದೆ.

ಕೃಷ್ಣಪ್ಪ ಅವರ ಕ್ಷೇತ್ರದಲ್ಲಿರುವ 18 ಕಿ.ಮೀ ರಸ್ತೆಯ ಒತ್ತಡ ಕಡಿಮೆ ಮಾಡಲು ಪರ್ಯಾಯ ರಸ್ತೆ ಮಾಡಬೇಕಿದೆ. ಕನಕಪುರ ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿ ಮಧ್ಯೆ ಹೊಸ ರಸ್ತೆ ಯೋಜನೆಗೆ ಈ ಹಿಂದೆ ಬಿಡಿಎ ನೋಟಿಫಿಕೇಶನ್ ಆಗಿದ್ದು ಅದಕ್ಕೆ ಮರುಜೀವ ನೀಡಲು ಪ್ರಯತ್ನ ಆರಂಭವಾಗಿದೆ ಎಂದರು.

ನಮ್ಮ ಸರ್ಕಾರದ ಗೃಹಲಕ್ಷ್ಮಿ ಯೋಜನೆಯಲ್ಲಿ 1.04 ಕೋಟಿ ಜನರಿಗೆ ಪ್ರತಿ ತಿಂಗಳು ತಲಾ 2 ಸಾವಿರ ಹಣ ತಲುಪುತ್ತಿದೆ. ಬೆಸ್ಕಾಂ ನಲ್ಲಿ 80 ಲಕ್ಷ ಸಂಪರ್ಕಗಳಿದ್ದು, 67 ಲಕ್ಷ ಜನರು ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಆ ಮೂಲಕ ಬೆಂಗಳೂರಿನ ಶೇ. 74 ರಷ್ಟು ಜನರು ಇದರ ಉಪಯೋಗ ಪಡೆದಿದ್ದಾರೆ. ಇದಕ್ಕಾಗಿ ಸರ್ಕಾರ 362 ಕೋಟಿ ಹಣ ನೀಡಿದೆ ಎಂದರು.

ಚುಟುಕು ಸುದ್ದಿ

ಹಾವೇರಿ ನೈತಿಕ ಪೋಲಿಸ್ ಗಿರಿ ಬಗ್ಗೆ ಸಿಎಂ ಸಿದ್ದರಾಮಯ್ಯ ಮೌನವೇಕೆ : ಬಸವರಾಜ ಬೊಮ್ಮಾಯಿ ಪ್ರಶ್ನೆ

ಉದಯಕಾಲ ನ್ಯೂಸ್

ಬೆಂಗಳೂರು: ನೈತಿಕ ಪೊಲೀಸ್ ಗಿರಿ ವಿರುದ್ಧ ಯಾವಾಗಲೂ ಮಾತನಾಡುತ್ತಿದ್ದ ಸಿಎಂ ಸಿದ್ದರಾಮಯ್ಯ ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನಲ್ಲಿ ನಡೆದಿರುವ ನೈತಿಕ ಪೊಲಿಸ್ ಗಿರಿಯ ಬಗ್ಗೆ ಯಾಕೆ ಮೌನ ವಹಿಸಿದ್ದಾರೆ. ಈ ಪ್ರಕರಣದಲ್ಲಿ ಸಿಎಂ ತಮ್ಮ ನಿಲುವು ಪ್ರಕಟಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಗುರುವಾರ ಮಾತನಾಡಿದ ಅವರು, ಅಲ್ಪ ಸಂಖ್ಯಾತ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಆಗಿರುವ ಆರೋಪ ಕೇಳಿ ಬಂದಿದ್ದು, ಮಹಿಳೆಯ ವೈದ್ಯಕೀಯ ಪರೀಕ್ಷೆ ನಡೆಸಿ, ಪೊಲೀಸರು ಎಲ್ಲ ಆಯಾಮದಲ್ಲಿಯೂ ತನಿಖೆ ನಡೆಸಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ನೀಡಬೇಕು.

ವಿಭಿನ್ನ ಕೋಮಿನವರು ಒಂದು ರೂಮಿನಲ್ಲಿ ಇದ್ದಾಗ ಅವರ ಮೇಲೆ ಹಲ್ಲೆಯಾಗಿದೆ. ಈ ಬಗ್ಗೆ ಹಾವೇರಿ ಪೊಲೀಸ್ ವರಿಷ್ಠರ ಜೊತೆ ಮಾತನಾಡಿದ್ದೇನೆ. ಅವರು ಅದನ್ನು ಅಲ್ಲಗಳೆಯುತ್ತಿದ್ದಾರೆ. ಆದರೆ, ತಕ್ಷಣ ಮಹಿಳೆಗೆ ವೈದ್ಯಕೀಯ ಪರೀಕ್ಷೆ ನಡೆಸುವಂತೆ ಆಗ್ರಹಿಸಿದ್ದೇನೆ. ನೈತಿಕ ಪೊಲೀಸ್ ಗಿರಿ ಮಾಡಿದರೆ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದರು. ಈಗ ಅಲ್ಪ ಸಂಖ್ಯಾತ ಮಹಿಳೆಯ ಮೇಲೆಯೇ ದೌರ್ಜನ್ಯ ಆಗಿದೆ. ಅವರಿಗೆ ರಕ್ಷಣೆ ಕೊಡಲು ಆಗುತ್ತಿಲ್ಲ. ಈ ಪ್ರಕರಣ ದಲ್ಲಿ ಎಲ್ಲ ಆಯಾಮದಲ್ಲೂ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ಪೀಣ್ಯ ದಾಸರಹಳ್ಳಿ : ದಾಸರಹಳ್ಳಿ ಕ್ಷೇತ್ರದ ಚೊಕ್ಕಸಂದ್ರದ ಗುಂಡಪ್ಪ ಬಡಾವಣೆಯಲ್ಲಿ 1 ಕೋಟಿ ವೆಚ್ಚದ ಡಾಂಬರು ರಸ್ತೆ ಕಾಮಗಾರಿಗೆ ಶಾಸಕ ಎಸ್. ಮುನಿರಾಜು ಅವರು ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ಸುರೇಶ್ ಗೌಡ, ಲಾರಿ ಮುನಿರಾಜು, ವಿಜಯ್ ಕುಮಾರ್, ಚೇತನ್, ಎಇಇ ನಾಗಭೂಷಣ್ ಮತ್ತು ಮಹಿಳಾ ಮುಖಂಡರು, ಸ್ಥಳೀಯರು ಇದ್ದರು.

ಪೊಲೀಸ್ ಇಲಾಖೆಯಲ್ಲಿ ತಾಂತ್ರಿಕ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ ಸೈಬರ್ ಸೆಕ್ಯುರಿಟಿ ಅನಾಲಿಸ್ಟ್ 08 ಹುದ್ದೆಗಳು ಹಾಗೂ ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ 08 ಹುದ್ದೆಗಳು ಹೀಗೆ 16 ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪತ್ರಿಕಾ ವಿತರಕರು ಸೌಲಭ್ಯ ಬಳಸಿಕೊಳ್ಳಲು ಕರೆ
ಯಶವಂತಪುರದಲ್ಲಿ ವಿಮೆ ನೋಂದಣಿಗೆ ಚಾಲನೆ

ಉದಯಕಾಲ ನ್ಯೂಸ್

ಬೆಂಗಳೂರು: ಅಸಂಘಟಿತ ವಲಯದ ಪತ್ರಿಕಾ ವಿತರಕರಿಗೆ ಸಾಮಾಜಿಕ ಭದ್ರತೆ ನೀಡುವ ನಿಟ್ಟಿನಲ್ಲಿ ಸರ್ಕಾರ ಜೀವವಿಮಾ ಯೋಜನೆ ಜಾರಿಗೊಳಿಸಿದೆ ಎಂದು ಕಾರ್ಮಿಕ ಇಲಾಖೆ (ವಿಭಾಗ 1) ಸಹಾಯಕ ಕಾರ್ಮಿಕಾಧಿಕಾರಿ ಎಂ.ಎನ್ .ದೇವರಾಜು ತಿಳಿಸಿದರು.

ಯಶವಂತಪುರ ಎಪಿಎಂಸಿ ಯಾರ್ಡ್ ಸಭಾಂಗಣದಲ್ಲಿ ಗುರುವಾರ ಕಾರ್ಮಿಕ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಸಂಯುಕ್ತವಾಗಿ ಏರ್ಪಡಿಸಿದ್ದ ಗಿಗ್ ಕಾರ್ಮಿಕರ ವಿಮಾ ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

ಪತ್ರಿಕಾ ವಿತರಕರು ಅಪಘಾತದಲ್ಲಿ ಮೃತಪಟ್ಟರೆ 2 ಲಕ್ಷ ರೂ, ಆಸ್ಪತ್ರೆ ಸೇರಿದರೆ 1 ಲಕ್ಷ ರೂ ನೆರವು ನೀಡಲಾಗುವುದು. ನೋಂದಣಿ ಪ್ರಕ್ರಿಯೆ ನಿರಂತರವಾಗಿ ಇರಲಿದೆ. ಇಶ್ರಮ್ ಪೋರ್ಟಲ್‌ನಲ್ಲಿ ಎಲ್ಲರೂ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಹೇಳಿದರು. ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ನಿರ್ಲಕ್ಷಿತ ಸಮುದಾಯವಾಗಿದ್ದ ಪತ್ರಿಕಾ ವಿತರಕರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಸತತವಾಗಿ ಸಂಘಟಿತ ಹೋರಾಟ ನಡೆಸಿದ ಪರಿಣಾಮ ಯೋಜನೆ ರೂಪುಗೊಂಡಿದೆ. ಯೋಜನೆಯು ಎಲ್ಲರಿಗೂ ತಲುಪುವಂತಾಗಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ನಮ್ಮ ಸಂಘಟಿತ ಒತ್ತಾಯಕ್ಕೆ ಕೂಡಲೆ ಸ್ಪಂಧಿಸಿದ ಸಿಎಂ ಸಿದ್ದರಾಮಯ್ಯ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು. ಪತ್ರಿಕಾ ವಿತರಕರು ತಮ್ಮ ವೃತ್ತಿ ಬಗ್ಗೆ ಗೌರವ ಇಟ್ಟುಕೊಂಡು ಬದ್ದತೆಯಿಂದ ಕೆಲಸ ಮಾಡಬೇಕು. ಪತ್ರಿಕೆ ಹಾಕುತ್ತಲೇ ಬದುಕು ರೂಪಿಸಿಕೊಂಡು ರಾಷ್ಟ್ರಪತಿ ಹುದ್ದೆಗೇರಿದ ಡಾ.ಎಪಿಜೆ ಅಬ್ದುಲ್ ಕಲಾಂ ನಮಗೆ ಆದರ್ಶವಾಗಬೇಕು ಎಂದರು.

70 ವರ್ಷಕ್ಕೆ ವಿಸ್ತರಿಸಲು ಒಕ್ಕೂಟ ಆಗ್ರಹ

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಶಂಭುಲಿಂಗ ಮಾತನಾಡಿ, ಯೋಜನೆ ರೂಪುಗೊಳ್ಳಲು ಕೆಯುಡಬ್ಲೂ?ಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಹೋರಾಟ ಮರೆಯುವಂತಿಲ್ಲ. ನಮ್ಮ ಬೆಂಬಲವಾಗಿ ನಿಂತ ಅವರಿಗೆ ಅಭಿನಂದಿಸುತ್ತೇವೆ ಎಂದರು.

ಯೋಜನೆಯ ಷರತ್ತುಗಳಲ್ಲಿ ಗರಿಷ್ಠ 60 ವರ್ಷದ ತನಕ ಇರುವುದನ್ನು 70 ವರ್ಷಗಳಿಗೆ ವಿಸ್ತರಿಸಬೇಕು. ಆಗ ಎಲ್ಲರಿಗೂ ಈ ಸೌಲಭ್ಯ ಲಭ್ಯವಾಗುತ್ತದೆ. ಇಲ್ಲದೆ ಇದ್ದರೆ ಬಹಳ ಪತ್ರಿಕಾ ವಿತರಕರು ಯೋಜನೆ ವಂಚಿತರಾಗಲಿದ್ದಾರೆ ಎಂದು ಒತ್ತಾಯಿಸಿದರು.

ಈ ಒತ್ತಾಯವನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಕಾರ್ಮಿಕಾಧಿಕಾರಿಗಳು ಭರವಸೆ ನೀಡಿದರು. ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಶಿವಾನಂದ, ಶಿವಕುಮಾರ್, ಸಹಾಯಕರಾದ ಬಾಲಾಜಿ, ಸುಧೀಂದ್ರ, ಹೊನ್ನಪ್ಪ ಮತ್ತಿತರರು ಹಾಜರಿದ್ದರು. ಒಂದೇ ದಿನ ಸುಮಾರು 300ಕ್ಕೂ ಹೆಚ್ಚು ಪತ್ರಿಕಾ ವಿತರಕರು ನೋಂದಣಿ ಮಾಡಿಸಿಕೊಂಡರು.

ಆನೇಕಲ್ಲಿನ ಪುರಾಣ ಪ್ರಸಿದ್ಧ ಶ್ರೀ ಕಕ್ಕೆ ಮಲ್ಲೇಶ್ವರ ಸ್ವಾಮಿಯ ಲಿಂಗದ ಮೇಲೆ ಸೂರ್ಯನ ಕಿರಣ ಬೀಳುತ್ತದೆ. ಸುತ್ತಮುತ್ತಲ ಗ್ರಾಮಗಳ ಜನರು ಪರವು ಎಂದು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ. ನವಜ್ಯೋತಿ ಕನ್ನಡ ಕಲಾ ಸಂಘದವರು ನಿತ್ಯ ಅನ್ನದಾನ ಭವನವನ್ನು ನಿರ್ಮಿಸಿ ನೀಡಿದ್ದು ಅಧ್ಯಕ್ಷ ಉಮಾಪತಿ, ತಿ. ನಾಗರಾಜು, ಜಗದೀಶ್, ಪ್ರಸನ್ನ ಮುಖ್ಯಾಧಿಕಾರಿ ರಾಜೇಶ್ ಇದ್ದಾರೆ.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಓ.ಎಸ್.ನಂ.323/2011

ವಾದಿ: ಶ್ರೀ. ಮಧು ಬಿನ್ ಮರಿಮಾದೇಗೌಡ ವಯಸ್ಸು 52 ನರ್ಷ ವಾಸ: ಮಾದೇಗೌಡನದೊಡ್ಡಿ ಗ್ರಾಮ, ವಿರುಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು: ಶ್ರೀ. ಶಿವರಾಜು ಮತ್ತು ಇತರರು 3. ಶ್ರೀಮತಿ ಸುಷ್ಮಾ ಬಿನ್ ಶಿವರಾಜು, ವಯಸ್ಸು 31 ವರ್ಷ, ವಾಸ: ಕೆಮ್ಮಾಳೆ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಮೂಲಕ ಮೇಲ್ಕಂಡ 3ನೇ ಪ್ರತಿವಾದಿರವರಿಗೆ ತಿಳಿಯಪಡಿಸುವುದೇನೆಂದರೆ, ವಾದಿಯು ಮಾನ್ಯ ಕನಕಪುರ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 323/2011 ರ ದಾವೆಯಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕೆಮ್ಮಾಳೆ ಗ್ರಾಮದ ಸ್ವತ್ತಿನ ಮೇಲೆ ನಿರ್ಧಿಷ್ಟ ಕರಾರು ನೆರವೇರಿಕೆ ಮತ್ತು ಇತರ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಿಮ್ಮನ್ನು 3ನೇ ಪ್ರತಿವಾದಿಯನ್ನಾಗಿ ಸೇರಿಸಿದ್ದು, ನೀವು ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 20.02.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕೆಮ್ಮಾಳೆ ಗ್ರಾಮದ ಸರ್ವೆ ನಂ.53/2ರ ವಿಸ್ತೀರ್ಣ 1 ಎಕರೆ 13 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಚೂಡೇಗೌಡರ ಜಮೀನು ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಚಿಕ್ಕತಿಮ್ಮೇಗೌಡರವರ ಜಮೀನು
ದಿನಾಂಕ 28ನೇ ಡಿಸಂಬರ್ 2023 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ದೇವದಾಸ್
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಪ್ರತಿದಿನ ಉದಯಕಾಲ ಓದಿರಿ

CHANGE OF NAME

I KapilDev Hahesh Sha Kanu S/O Hahesh Sha Kanu, R/O Machohalli, Magadi Main Road, Dasanapura Hobli, Bangalore 5600091 Has Changed My Name From KapilDev Hahesh Sakanu To KapilDev Hahesh Sha Kanu As Per Affidavit Dated 06 Jan. 2024, sworn before notary Chandrashekaraiah, Bangalore

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
(ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಝಾ, 4ನೇ ಮಹಡಿ, ಹಂತ–II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು–600 002.

ಸ್ವಾಧೀನ ಪ್ರಕಟಣೆ ನಿಯಮ (8(I) (ಸ್ಥಿರಾಸ್ತಿಗಾಗಿ)

ಕೆಳ ಸಹಿದಾರರು, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು 2002ರ [ಕಾಯ್ದೆ 2002ರ 54] ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು ನೀಡಿದ್ದರು ಅದರಂತೆ ಸದರಿ ಸೂಚನೆಯು ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು & ಬಡ್ಡಿ ಮತ್ತು ಖರ್ಚು ಹಾಗೂ ಇತರೆ ವೆಚ್ಚಗಳನ್ನು ಪಾವತಿಮಾಡಲು ಅವರನ್ನು ಕೋರಿದ್ದರು. ಸಾಲಗಾರರು ತಗಾದೆ ಸೂಚನೆಯಲ್ಲಿ ಸೂಚಿಸಿರುವ ಮೊತ್ತವನ್ನು ಪಾವತಿ ಮಾಡಲು ವಿಫಲರಾಗಿರುವುದರಿಂದ, ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಅಧಿಕೃತ ಅಧಿಕಾರಿಯವರು ಈ ಕೆಳಗೆ ಸೂಚಿಸಿರುವ ಆಸ್ತಿಯನ್ನು ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮಗಳು 2002ರ ಸೆಕ್ಷನ್ 13ರ ಸಬ್ ಸೆಕ್ಷನ್ (4)ರ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸ್ವಾಧೀನ ಪಡಿಸಿಕೊಂಡಿದ್ದಾರೆ. ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಕೆಳಗೆ ನಮೂದಿಸಿರುವ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು , ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಇವರಿಗೆ ಬರಬೇಕಾದ ಬಾಕಿ ಮೊತ್ತ & ಮುಂದಿನ ಬಡ್ಡಿ, ಇತರೆ ಖರ್ಚು ವೆಚ್ಚ ಇತ್ಯಾದಿಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ. ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13ರ ಸಬ್–ಸೆಕ್ಷನ್ (8)ರ ಅನ್ವಯ ಇರುತ್ತದೆ.

ಕ್ರ. ಸಂ.	ಸಾಲಗಾರರ ಹೆಸರು	ಆಸ್ತಿಯ ವಿವರ	ತಗಾದೆ ಸೂಚನೆಯ ದಿನಾಂಕ ಮತ್ತು ಮೊತ್ತ ರೂ.	ಸಾಂಕೇತಿಕವಾಗಿ ಸ್ವಾಧೀನ ಪಡಿಸಿಕೊಂಡ ದಿನಾಂಕ
1	ಶಾಖೆ – ಯಲಹಂಕ ಸಾಲ ಸಂಖ್ಯೆ – SBIN0000934 ಸಾಲಗಾರರು : ಶ್ರೀ ವೆಂಕಟೇಶ್ ಎಂ ಪಿ ಸಹ–ಸಾಲಗಾರರು: ಮಣಿ ಎನ್, ಪದ್ಮ	ವಸತಿ ಆಸ್ತಿ ಹೊಂದಿರುವ ಸೈಟ್ ನಂ.62 ಹಳೆಯ ವಿಪಿ ಖಾತಾ ಸಂಖ್ಯೆ 11 ರ ಎಲ್ಲಾ ಭಾಗವಾಗಿರುವ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ಖಾತಾ ಸಂ.509/62, 63 ಲಕ್ಷ್ಮೀಪುರ ಗ್ರಾಮದಲ್ಲಿದೆ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು, ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಎಲ್ಲಾ ಅಳತೆಯಲ್ಲಿ 1200 ಚದರ ಅಡಿ, ಮತ್ತು ನೆಲ ಮಹಡಿ ಮತ್ತು ಮೊದಲ ಮಹಡಿ ತಲಾ 6 ಚದರವನ್ನು ಒಳಗೊಂಡಿರುತ್ತದೆ, ಎಲ್ಲಾ 12 ಸ್ಕ್ವೇರ್‌ಗಳಲ್ಲಿ ಆರ್‌ಸಿಸಿ ಛಾವಣಿಯ ಕಟ್ಟಡ ಮೊಸಾಯಿಕ್ ನೆಲಹಾಸು ಮತ್ತು ಜಂಗಲ್ ಮರದ ಬಾಗಿಲುಗಳು ಮತ್ತು ಕಿಟಕಿಗಳು, ಎಲ್ಲಾ ನಾಗರಿಕ ಸೌಕರ್ಯಗಳೊಂದಿಗೆ, ಬೋರ್‌ವೆಲ್, ಮತ್ತು ಪೂರ್ವಕ್ಕೆ 23 ಅಡಿ ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ.55, ಉತ್ತರದಿಂದ: ಆಸ್ತಿ ಸಂಖ್ಯೆ.61, ದಕ್ಷಿಣಕ್ಕೆ: ಆಸ್ತಿ ಸಂಖ್ಯೆ.63.	18.10.2023 & 3189349/-	11-01-2024

ದಿನಾಂಕ : 12.01.2024, ಸ್ಥಳ: ಬೆಂಗಳೂರು — ಸಹಿ/– ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ

ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಪಿ ಅಂಡ್ ಎಸ್.ಸಿ ನಂ.09/2023

ಅರ್ಜಿದಾರರು: 1. ಶ್ರೀಮತಿ ನಾಗರತ್ನಮ್ಮ ಡಿ.ಪಿ ಕೋಂ. ಲೇಟ್ ಪುಟ್ಟಸ್ವಾಮಿ. ಎನ್.ಪಿ ವಯಸ್ಸು 48 ವರ್ಷ 2. ಶ್ರೀ ಮನೋಜ್. ಎನ್ ಪಿ ಬಿನ್ ಲೇಟ್ ಪುಟ್ಟಸ್ವಾಮಿ. ಎನ್.ಪಿ ವಯಸ್ಸು 27 ವರ್ಷ. 3. ಶ್ರೀ ಮನೋಷ್. ಎನ್ ಪಿ. ಬಿನ್ ಲೇಟ್ ಪುಟ್ಟಸ್ವಾಮಿ. ಎನ್.ಪಿ ವಯಸ್ಸು 22 ವರ್ಷ ಎಲ್ಲರ ವಾಸ; #2, ಚರ್ಚ್ ರಸ್ತೆ, ಜೆ. ಸಿ. ಬಡಾವಣೆ, ಕಾರ್ಪೋರೇಷನ್ ಬ್ಯಾಂಕ್ ಎದುರು, ಕನಕಪುರ ಟೌನ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ,

ವಿರುದ್ಧ

ಎದುರುದಾರರು: ಇಲ್ಲ

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2ನೇ ಮತ್ತು 3ನೇ ಅರ್ಜಿದಾರರ ತಂದೆಯವರಾದ ಶ್ರೀಯುತ ಪುಟ್ಟಸ್ವಾಮಿ ಎನ್.ಪಿ ಬಿನ್ ಲೇಟ್ ಪುಟ್ಟೇಗೌಡ ರವರು ದಿನಾಂಕ 18.11.2022 ರಂದು ಕನಕಪುರ ಟೌನ್ ನಲ್ಲಿ ನಿಧನ ಹೊಂದಿರುತ್ತಾರೆ. ಅವರ ಜೀವಿತ ಕಾಲದಲ್ಲಿ ಈ ಕೆಳಕಂಡ ತಪಾಶೀಲು ಪಟ್ಟಿಯಲ್ಲಿ ಕಂಡಂತೆ ವಿಮೆಯ ಕರಾರು ಪತ್ರಗಳನ್ನು ರಿಲೈನ್ಸ್ ಜನರಲ್ ಇನ್ಸುರೆನ್ಸ್ ಕಂಪನಿಯಿಂದ ಪಡೆದುಕೊಂಡಿರುತ್ತಾರೆ. ಸದರಿ ಕಂಪನಿಯವರು ವಿಮೆಯ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಸಲ್ಲಿಸುರತ್ತಾರೆ. ಇವರ ಉತ್ತರಾಧಿಕಾರದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 26/02/2024ರ ಬೆಳಿಗ್ಗೆ ಸರಿಯಾಗಿ 11 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

SCHEDULE

The Policy under Certificate of insurance bearing Policy certificate No. C012207121330546907070211, RGICL Policy Reference ID 130492229141194006, Risk Start Date 13.07.2022 Risk End date:12.07.2023 which bears the Master Policy No. 920292129140000242 by an authorized signatory of reliance genral insurance company Limited and sum insured at Rs. 1,00,000/-(Rupees One Laksh only)

ದಿನಾಂಕ 30ನೇ ಡಿಸಂಬರ್ 2023 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಹಿರಿಯ ಶ್ರೇಣಿ ನ್ಯಾಯಾಧೀಶರವರ ನ್ಯಾಯಾಲಯ,ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ದೇವದಾಸ್
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಓ.ಎಸ್.ನಂ. 55/2019

ವಾದಿ: ಶ್ರೀಮತಿ ಪುಟ್ಟಮ್ಮ ಕೋಂ ಲೇಟ್ ರಾಜಶೇಖರ ಆರಾಧ್ಯ ವಯಸ್ಸು 63 ವರ್ಷ ವಾಸ: ಚಿಕ್ಕಮುದವಾಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ. ಮನೆ ನಂ. 212 24ನೇ ಕ್ರಾಸ್, ಜಯನಗರ, 6ನೇ ಬ್ಲಾಕ್, ಜಯನಗರ, 24ನೇ ಕ್ರಾಸ್ ಬೆಂಗಳೂರು.

ವಿರುದ್ಧ

ಪ್ರತಿವಾದಿಗಳು: ಶ್ರೀ ವೆಂಕಟಪ್ಪ ಮತ್ತು ಇತರರು 1. ಶ್ರೀ ವೆಂಕಟಪ್ಪ ಬಿನ್ ತಿಮ್ಮೇಗೌಡ ವಯಸ್ಸು 60 ವರ್ಷ 2. ಶ್ರೀಮತಿ ಜಯಮ್ಮ ಕೋಂ ವೆಂಕಟಪ್ಪ ವಯಸ್ಸು 50 ವರ್ಷ 3. ಶ್ರೀಮತಿ ಲೀಲಾವತಿ ಬಿನ್ ವೆಂಕಟಪ್ಪ ವಯಸ್ಸು 28 ವರ್ಷ ಮೇಲ್ಕಂಡವರ ವಾಸ: ಹನುಮಂತನಗರ ಗ್ರಾಮ, ಚೀಲೂರು ದಾಖ್ಲೆ, ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಈ ಮೂಲಕ ಮೇಲ್ಕಂಡ 1 ರಿಂದ 3ನೇ ಪ್ರತಿವಾದಿರವರಿಗೆ ತಿಳಿಯಪಡಿಸುವುದೇನೆಂದರೆ, ವಾದಿಯು ಮಾನ್ಯ ಕನಕಪುರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಅಸಲು ದಾವಾ ಸಂಖ್ಯೆ: 55/2019 ರ ದಾವೆಯಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಹನುಮಂತನಗರ ಗ್ರಾಮದ ಸ್ವತ್ತಿನ ಮೇಲೆ ನಿರ್ಧಿಷ್ಟ ಕರಾರು ನೆರವೇರಿಕೆ ಮತ್ತು ಇತರ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಿಮ್ಮನ್ನು ಪ್ರತಿವಾದಿಯನ್ನಾಗಿ ಸೇರಿಸಿದ್ದು, ನೀವು ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 17.02.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

1.ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಹನುಮಂತನಗರ ಗ್ರಾಮ ಚೀಲೂರು ದಾಖ್ಲೆ ಆರ್.ಸಿ.ಸಿ ಛಾವಣಿ ಮನೆ ನಂ.45/37/24/38 ಗಣಕೀಕೃತ (ಖಾ.ನಂ.152900204301500044) ರಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ 12.19 ಮೀಟರ್ (40 ಅಡಿಗಳು), ಉತ್ತರ–ದಕ್ಷಿಣ 9.14 ಮೀಟರ್ (30 ಅಡಿಗಳು) ಒಟ್ಟು ವಿಸ್ತೀರ್ಣ 1200 ಚದರ ಮೀಟರ್ ಅಳತೆಯುಳ್ಳ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸೈಟ್ ನಂ.25 ಪಶ್ಚಿಮಕ್ಕೆ: ಸೈಟ್ ನಂ.23 ಉತ್ತರಕ್ಕೆ: ಸರ್ಕಾರಿ ರಸ್ತೆ ದಕ್ಷಿಣಕ್ಕೆ: ಸೈಟ್ ನಂ.49
ದಿನಾಂಕ 09ನೇ ಜನವರಿ 2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ವೈ. ಗೋವಿಂದರಾಜು
ವಕೀಲರು
ಸ್ಥಳ : ಕನಕಪುರ
ದಿನಾಂಕ : 09/01/2024

ನಮೂನೆ–ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 6 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016)

ಜಿಸ್ಬ್ಯಾಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್ ಇದರ ಸಾಲಗಾರರ ಗಮನಕ್ಕೆ

ಸೂಕ್ತ ವಿವರಗಳು

1.	ಕಾರ್ಪೊರೇಟ್ ಸಾಲಗಾರನ ಹೆಸರು	ಜಿಸ್ಬ್ಯಾಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ವ್ಯಕ್ತಿ ಪ್ರಾರಂಭದ ದಿನ	10 ಡಿಸೆಂಬರ್ 2003
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ಸಾಲಗಾರನು ಆರಂಭ / ನೊಂದಣಿ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್, ಮುಂಬಯಿ
4.	ಕಾರ್ಪೊರೇಟ್ ಸಾಲಗಾರನ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U55101MH2003PTC143481
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ವಿಳಾಸ	4ನೇ ಮಹಡಿ, ರಹೇಜ ಛೇಂಬರ್ಸ್, ಲಿಂಕಿಂಗ್ ರೋಡ್ ಮತ್ತು ಮೈನ್ ಅವೆನ್ಯು, ಸಾಂತಾಕ್ರೂಜ್ ಪಶ್ಚಿಮ, ಮುಂಬಯಿ ನಗರ, ಮುಂಬಯಿ, ಮಹಾರಾಷ್ಟ್ರ, ಭಾರತ –400054
6.	ಕಾರ್ಪೊರೇಟ್ ಸಾಲಗಾರನ ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಆರಂಭದ ದಿನಾಂಕ	09 ಜನವರಿ 2024
7.	ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಮುಕ್ತಾಯಗೊಳ್ಳುವ ಅಂದಾಜು ದಿನಾಂಕ	09 ಜುಲೈ 2024
8.	ಮಧ್ಯಂತರ ವೃತ್ತಿಪರ ನಿರ್ಣಯದಾರರಾಗಿ ಕಾರ್ಯನಿರ್ವಹಿಸುವ ವೃತ್ತಿಪರ ನಿರ್ಣಯದಾರರ ಹೆಸರು ಮತ್ತು ನೋಂದಣಿ ಸಂ.	ಹೆಸರು: ಜಯೇಶ್ ನಟ್‌ವರ್‌ಲಾಲ್ ಸಂಗ್‌ರಾಜ್ಕ ನೋಂದಣಿ ಸಂ. IBBI/IPA-001/IP-P00216/2017-2018/10416
9.	ಮಂಡಳಿಯಲ್ಲಿ ನೋಂದಾಯಿಸಲಾಗಿರುವಂತೆ ಮಧ್ಯಂತರ ವೃತ್ತಿಪರ ನಿರ್ಣಯದಾರರ ವಿಳಾಸ ಮತ್ತು ಇ-ಮೇಲ್ ಐಡಿ	ನೋಂದಾಯಿತ ವಿಳಾಸ: 405–407, ಹಿಂದ್ ರಾಜಸ್ತಾನ್ ಕಟ್ಟಡ ಡಿ. ಎಸ್.ಫಾಲ್ಕೆ ರಸ್ತೆ, ದಾದರ್ ಪೂರ್ವ, ಮುಂಬಯಿ–400014 ಇ–ಮೇಲ್ ಐಡಿ: jayesh.sanghrajka@incorpadvisory.in
10.	ಸಂವಹನಕ್ಕಾಗಿ ಬಳಸಲು ಮಧ್ಯಂತರ ವೃತ್ತಿಪರ ನಿರ್ಣಯದಾರರ ವಿಳಾಸ ಮತ್ತು ಇ-ಮೇಲ್ ವಿಳಾಸ	ಸಂವಹನ ವಿಳಾಸ: ಇನ್‌ಕಾರ್ಪ್ ರಿಸ್ಟ್ರಕ್ಚರಿಂಗ್ ಸರ್ವಿಸಸ್ ಎಲ್‌ಎಲ್‌ಪಿ 405–407, ಹಿಂದ್ ರಾಜಸ್ತಾನ್ ಕಟ್ಟಡ, ಡಿ. ಎಸ್.ಫಾಲ್ಕೆ ರಸ್ತೆ, ದಾದರ್ ಪೂರ್ವ, ಮುಂಬಯಿ–400014 ಸಂವಹನಕ್ಕಾಗಿ ಇ–ಮೇಲ್ ಐಡಿ: cirp.gstaad1@gmail.com
11.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	23 ಜನವರಿ 2024
12.	ಸಾಲಗಾರರ ವರ್ಗಗಳು, ಯಾವುದಾದರೂ ಇದ್ದರೆ, ಸೆಕ್ಷನ್ 21 ರ ಉಪ–ವಿಭಾಗ (6ಎ) ಕಾಯಿದೆ (ಬಿ) ಅಡಿಯಲ್ಲಿ, ಮಧ್ಯಂತರ ರೆಸಲ್ಯೂಷನ್ ವೃತ್ತಿಪರರು ಖಚಿತಪಡಿಸಿರುವುದು	ಅನ್ವಯಿಸುವುದಿಲ್ಲ
13.	ಒಂದು ವರ್ಗದಲ್ಲಿ ಸಾಲಗಾರರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲು ಗುರುತಿಸಲಾದ ದಿವಾಳಿತನದ ವೃತ್ತಿಪರರ ಹೆಸರುಗಳು (ಪ್ರತೀ ವರ್ಗಕ್ಕೆ ಮೂರು ಹೆಸರುಗಳು)	ಈವರೆಗೆ ಅನ್ವಯಿಸುವುದಿಲ್ಲ (ಎ) ಕ್ಲೈಮ್ ಅರ್ಜಿಗಳನ್ನು ಡೌನ್‌ಲೋಡ್ ಮಾಡಲು ವೆಬ್ ಲಿಂಕ್
14.	(ಎ) ಸೂಕ್ತ ದಾಖಲೆಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಲಭ್ಯವಿರುವುದು:	www.ibbi.gov.in/downloadforms.html (ಬಿ) ಅನ್ವಯವಾಗುವುದಿಲ್ಲ

09ನೇ ಜನವರಿ 2024 ರಿಂದ **ಜಿಸ್ಬ್ಯಾಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್‌ನ** ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ, ಮುಂಬಯಿ ಪೀಠವು 09ನೇ ಜನವರಿ 2024 ರ ತನ್ನ ಆದೇಶ ಸಿಪಿ(ಐಬಿ)291/ಎಂಬಿ/2023 ರ ತನ್ನ ಆದೇಶದಲ್ಲಿ ತಿಳಿಸಿದೆ.

ಜಿಸ್ಬ್ಯಾಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲ ಸಾಲಗಾರರಿಗೆ 23ನೇ ಜನವರಿ 2024 ರಂದು ಅಥವಾ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 10ರಲ್ಲಿ ನೀಡಿರುವ ಮಧ್ಯಂತರ ವೃತ್ತಿಪರ ನಿರ್ಣಯದಾರರಿಗೆ ವಿಳಾಸಕ್ಕೆ ಸಲ್ಲಿಸಲು ಕರೆ ನೀಡಲಾಗಿದೆ.

ಹಣಕಾಸು ಸಾಲಗಾರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದ ಎಲ್ಲಾ ಸಾಲಗಾರರು ಪುರಾವೆಗಳೊಂದಿಗೆ ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮ ಮೂಲಕ ತಮ್ಮ ಕ್ಲೈಮುಗಳನ್ನು ಸಲ್ಲಿಸಬೇಕು.

ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು.

ದಿನಾಂಕ: ಜನವರಿ 12, 2024
ಸ್ಥಳ: ಮುಂಬಯಿ

ಜಯೇಶ್ ನಟ್‌ವರ್‌ಲಾಲ್ ಸಂಗ್‌ರಾಜ್ಕ
ಜಿಸ್ಬ್ಯಾಡ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್‌ನ ವಿಷಯದಲ್ಲಿ ಮಧ್ಯಂತರ ವೃತ್ತಿಪರ ನಿರ್ಣಯದಾರರು
Registration Number: IBBI/IPA-001/IP-P00216/2017-2018/10416
AFA No. AA1/10416/02/250924/106031 valid till September 25, 2024

ಪ್ರತಿದಿನ ಉದಯಕಾಲ ಓದಿರಿ

Home First Finance Company India Limited,
CIN:L65990MH2010PLC240703, Website: homefirstindia.com
Phone No.: 180030008425, Email ID: loanfirst@homefirstindia.com

ಅನುಬಂಧ– IV-A [ನಿಯಮ 8 (6) ಗೆ ನಿಯಮ ನೋಡಿ]
ಸ್ಥಿರ ಆಸ್ತಿಗಳ ಮಾರಾಟಕ್ಕೆ ಸೂಚನೆ
ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6)ರ ನಿಬಂಧನೆಗಳನ್ನು ಓದಿಕೊಂಡಂತೆ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ಗಳು) ಮತ್ತು ಸಹ–ಸಾಲಗಾರ (ಗಳು) ಗೆ ಕಾಲಮ್ (ii) ರ ಪ್ರಕಾರ ನೋಟಿಸ್ ನೀಡಲಾಗಿದೆ. ಈ ಕೆಳಗಿನ ವಿವರಿಸಿದ ಸ್ಥಿರ ಗುಣಲಕ್ಷಣಗಳು ಕಾಲಮ್ (iii) ಪ್ರಕಾರ ಸುರಕ್ಷಿತ ಸಾಲಗಾರನಿಗೆ ಅಡಮಾನ / ವಿಧಿಸಲಾಗಿದೆ , ಇದರ ಭೌತಿಕವಾಗಿ ಸ್ವಾಧೀನವನ್ನು ಹೋಮ್ ಫಸ್ಟ್ ಫೈನಾನ್ಸ್ ಕಂಪನಿ ಇಂಡಿಯಾ ಲಿಮಿಟೆಡ್‌ನ ಅಧಿಕೃತ ಅಧಿಕಾರಿ ತನ್ನ ಬಾಕಿ ಮತ್ತು ಆಸಕ್ತಿಯನ್ನು ಇಲ್ಲಿ ವಿವರವಾಗಿ ಅರಿತುಕೊಂಡಿದ್ದಕ್ಕಾಗಿ ತೆಗೆದುಕೊಂಡಿದ್ದಾರೆ ಮತ್ತು ಬಾಕಿ ಹಣವನ್ನು ಮರುಪಾವತಿಸಲು ವಿಫಲವಾದ ಪರಿಣಾಮವಾಗಿ, ಸೆಕ್ಷನ್ 13 ರ ಅಡಿಯಲ್ಲಿ ನೀಡಲಾದ ಅಧಿಕಾರದ ವ್ಯಾಯಾಮದಲ್ಲಿ ಸಹಿ ಮಾಡಲಾಗಿದೆ (12) ಹೇಳಿದ ಕಾಯಿದೆಯ / ಆಸ್ತಿಗಳನ್ನು ಮಾರಾಟ ಮಾಡುವ ಮೂಲಕ ಬಾಕಿಗಳನ್ನು ಅರಿತುಕೊಳ್ಳಲು ಪ್ರಸ್ತಾಪಿಸಲಾಗಿದೆ ಮತ್ತು ಇದನ್ನು ಇಲ್ಲಿ ವಿವರಿಸಿದಂತೆ, 'ಎಲ್ಲಿ ಹೇಗಿದೆಯೊ ಹಾಗೆ', 'ಎಲ್ಲಿ ಏನಿದೆಯೋ ಹಾಗೆ' 'ಆಧಾರದ ಮೇಲೆ ನಲ್ಲಿ ಮಾರಾಟ ಮಾಡಲಾಗುತ್ತದೆ. ಹೋಮ್ ಫಸ್ಟ್ ಫೈನಾನ್ಸ್ ಕಂಪನಿ ಇಂಡಿಯಾ ಲಿಮಿಟೆಡ್‌ನಿಂದಾಗಿ, ಕಾಲಮ್ (ಐ) ಪ್ರಕಾರ ಸಾಲಗಾರ (ಗಳು) ಮತ್ತು ಸಹ–ಸಾಲಗಾರರಿಂದ ಪಡೆಯಬೇಕಾದ ಮೊತ್ತವನ್ನು ಮರುಪಡೆಯಲು "ಆನ್‌ಲೈನ್" ನಲ್ಲಿ ಹರಾಜು ನಡೆಸಲಾಗುವುದು.

ಕ್ರ. ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು & ವಿಳಾಸ	ಆಸ್ತಿಯ ವಿವರ	ತಗಾದೆ ಸೂಚನೆಯ ದಿನಾಂಕ ನಿಯಮ 13 (2)	ತಗಾದೆ ಸೂಚನೆಯ ದಿನಾಂಕದಿಂದ ಒಟ್ಟು ಬಾಕಿ (ರೂ.)	ಸ್ವಾಧೀನ ಪಡಿಸಿಕೊಂಡ ದಿನಾಂಕ	ಮಾರ್ಕೆಟ್ ಬೆಲೆ (ರೂ.)	ಇಎಂಡಿ (ರೂ.)	ಇ–ಹರಾಜಿನ ದಿನಾಂಕ ಮತ್ತು ಸಮಯ /	ಇಎಂಡಿ ಮತ್ತು ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ಅಧಿಕೃತ ಅಧಿಕಾರಿಯ ವಿವರ
1	ಸುನಿತಾ ರಾಥೋಡ್, ನಾಮದೇವ್ ರಾಥೋಡ್	ಫ್ಲಾಟ್ ಸಂಖ್ಯೆ. 408, ಬ್ಲಾಕ್ ಜೆ12, ಪ್ರಾವಿಡೆಂಟ್ ವೆಲ್ವರ್ತ್, ಯಲಹಂಕ, ಮುಖ್ಯ ದೊಡ್ಡಬಳ್ಳಾಪುರ ರಸ್ತೆ, ರಂಜನ್ ಕುಂಟೆ ಹತ್ತಿರ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು–561203	10-04-2022	9,45,606	05-01-2024	46,00,000	4,60,000	12-02-2024 (ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2ಗಂಟೆವರೆಗೆ)	10-02-2024 (ಸಂಜೆ 5ಗಂಟೆವರೆಗೆ)	9880948021

ನಿಯಮ ಮತ್ತು ಷರತ್ತುಗಳು:

ಇ–ಹರಾಜು ಸೇವಾ ಪೂರೈಕೆದಾರ	ಇ–ಹರಾಜು ವೆಬ್‌ಸೈಟ್ / ವಿವರಗಳಿಗಾಗಿ, ಇತರ ನಿಯಮಗಳು ಮತ್ತು ಷರತ್ತುಗಳಿಗಾಗಿ	ಖಾತೆ ಸಂಖ್ಯೆ: ಇಎಂಡಿ / ಇತರ ಮೊತ್ತವನ್ನು ಠೇವಣಿ ಮಾಡಲು	ಐಎಫ್‌ಎಸ್‌ಸಿ ಕೋಡ್	ಫಲಾನುಭವಿಯ ಹೆಸರು
ಮೆ॥ ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್–ಆಕ್ಷನ್ ಟೈಗರ್, ಸಂಪರ್ಕ ವ್ಯಕ್ತಿ: ರಾಮ್ ಶರ್ಮಾ – 8000023297, ಸಹಾಯವಾಣಿ ಸಂಖ್ಯೆ : 079-35022160 / 149 / 182,,E-ಮೇಲ್ ಐಡಿಗಳು : ramprasad@auctiontiger.net and support@auctiontiger.net	http://www.homefirstindia.com https://homefirst.auctiontiger.net	912020036268117– ಹೋಮ್ ಫಸ್ಟ್ ಫೈನಾನ್ಸ್ ಕಂಪನಿ ಇಂಡಿಯಾ ಲಿಮಿಟೆಡ್ – ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಎಂಐಡಿಸಿ, ಅಂಧೇರಿ ಈಸ್ಟ್.	UTIB0000395	ಅಧಿಕೃತ ಅಧಿಕಾರಿ, ಹೋಮ್ ಫಸ್ಟ್ ಫೈನಾನ್ಸ್ ಕಂಪನಿ ಇಂಡಿಯಾ ಲಿಮಿಟೆಡ್

ಬಿಡ್ ಹೆಚ್ಚಳ ಮೊತ್ತ – ರೂ. 10,000 / –. ವೆಬ್ ಪೋರ್ಟಲ್ (https://homefirst.auctiontiger.net)ನಲ್ಲಿ ಒದಗಿಸಲಾದ ಇ–ಹರಾಜು ಪ್ಲಾಟ್‌ಫಾರ್ಮ್ ಮೂಲಕ ಸಹಿ ಮಾಡದ ಮೂಲಕ ಮಾರಾಟ ಮಾಡಲಾಗುತ್ತದೆ. ಆನ್‌ಲೈನ್ ಇ–ಹರಾಜು ಬಿಡ್ ಫಾರ್ಮ್, ಘೋಷಣೆ, ಆನ್‌ಲೈನ್ ಹರಾಜು ಮಾರಾಟದ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರುವ ಇ–ಹರಾಜು ಟೆಂಡರ್ ಡಾಕ್ಯುಮೆಂಟ್ ಪೋರ್ಟಲ್ ಸೈಟ್‌ನಲ್ಲಿ ಲಭ್ಯವಿದೆ. ಅಧಿಕೃತ ಅಧಿಕಾರಿಯ ಉತ್ತಮ ಜ್ಞಾನ ಮತ್ತು ಮಾಹಿತಿಗೆ, ಗುಣಲಕ್ಷಣಗಳ ಬಗ್ಗೆ ಯಾವುದೇ ಅಸಮಾಧಾನವಿಲ್ಲ. ಹೇಗಾದರೂ, ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು, ಹಕ್ಕುಸ್ವಾಮ್ಯ, ಆಸ್ತಿಯ ಶೀರ್ಷಿಕೆ / ಹರಾಜು ಹಾಕಿದ ಹಕ್ಕುಗಳು ಮತ್ತು ಹಕ್ಕುಗಳು / ಹಕ್ಕುಗಳು / ಬಾಕಿ / ಆಸ್ತಿಯ ಮೇಲೆ ಪರಿಣಾಮ ಬೀರುವ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆ ನಡೆಸಬೇಕು. ಇ–ಹರಾಜು ಜಾಹೀರಾತು ರೂಪಿಸುವುದಿಲ್ಲ ಮತ್ತು ಯಾವುದೇ ಬದ್ಧತೆ ಅಥವಾ ಹೋಮ್ ಫಸ್ಟ್‌ನ ಯಾವುದೇ ಪ್ರಾತಿನಿಧ್ಯವನ್ನು ಪರಿಗಣಿಸುವುದಿಲ್ಲ. ಹೋಮ್ ಫಸ್ಟ್‌ಗೆ ತಿಳಿದಿರುವ ಅಥವಾ ತಿಳಿದಿಲ್ಲದಿದ್ದರೂ ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಎಲ್ಲ ಒತ್ತುಗಳೊಂದಿಗೆ ಆಸ್ತಿಯನ್ನು ಮಾರಾಟ ಮಾಡಲಾಗುತ್ತಿದೆ. ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳು / ಹಕ್ಕುಗಳು / ಬಾಕಿಗಳಿಗೆ ಅಧಿಕೃತ ಅಧಿಕಾರಿ / ಸುರಕ್ಷಿತ ಸಾಲಗಾರ ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ. ಮಾರಾಟವು ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಕಾಯ್ದೆ, 2002 ರ ಅಡಿಯಲ್ಲಿ ಸೂಚಿಸಲಾದ ನಿಯಮಗಳು / ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸರ್ಫೇಸಿ ಆಕ್ಟ್, 2002 ರ ಅಡಿಯಲ್ಲಿ ಸ್ಯಾಚುಟರಿ 30 ದಿನಗಳು ಮಾರಾಟದ ಸೂಚನೆ

ಸಾಲಗಾರ / ಜಾಮೀನುದಾರರಿಗೆರರಿಗೆ ಇ–ಹರಾಜಿನ ದಿನಾಂಕದ ಮೊದಲು ದಿನಾಂಕದ ಬಡ್ಡಿ ಮತ್ತು ಪೂರಕ ವೆಚ್ಚಗಳ ಜೊತೆಗೆ ಬೇಡಿಕೆಯ ಸೂಚನೆಯಲ್ಲಿ ನಮೂದಿಸಿರುವ ಮೊತ್ತವನ್ನು ಪಾವತಿಸಲು ಸೂಚಿಸಲಾಗುತ್ತದೆ, ಇದರಲ್ಲಿ ವಿಫಲವಾದರೆ ಆಸ್ತಿಯನ್ನು ಹರಾಜು / ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿ ಬಾಕಿ ಇದ್ದರೆ, ಬಡ್ಡಿ ಮತ್ತು ವೆಚ್ಚದೊಂದಿಗೆ ಮರುಪಡೆಯಲಾಗುತ್ತದೆ.

ದಿನಾಂಕ: 12/01/2024, ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಹೋಮ್ ಫಸ್ಟ್ ಫೈನಾನ್ಸ್ ಕಂಪನಿ ಇಂಡಿಯಾ ಲಿಮಿಟೆಡ್